ಠಾಣೆ ಕಳವು 7 -

ಈ) ಇಲ್ಲ.

ಉ) ಗ್ರಾಮಗಳಲ್ಲಿ ಗಸ್ತು, ನಾಕಾಬಂದಿ, ಅನುಮಾನಾಸ್ಪದ ವ್ಯಕ್ತಿಗಳ ತಪಾಸಣೆ, ರೌಡಿಗಳ ಮೇಲೆ ನಿಗಾ, ರೌಡಿ ನಿಗ್ರಹ ದಳದಿಂದ ಕಾರ್ಯಾಚರಣೆ ಮತ್ತು ಇತರೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು, ಈ ಕಾರ್ಯಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದರಿಂದಲೂ, ಮೇಲಧಿಕಾರಿಗಳು ಠಾಣ ಸರಹದ್ದಿಗೆ ಆಗಾಗ್ಗೆ ಭೇಟಿ ಕೊಟ್ಟು ನಿರೀಕ್ಷಣೆಯನ್ನು ನಡೆಸುತ್ತಿರುವುದರಿಂದಲೂ 1996ರಲ್ಲಿ ಈವರೆಗೆ ಉಳ್ಳಾಲದಲ್ಲಿ ಯಾವುದೇ ವೃತ್ತಿಪರ ಅಪರಾಧಿಗಳನ್ನು ಕೂಡ ತಡೆ ಹಿಡಿಯಲು ಅನುಕೂಲವಾಗಿರುತ್ತದೆ. ಇದೇ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಮುಂದುವರಿಸಿ ಕೊಲೆ ಮತ್ತು ಕಳ್ಳತನ ಪ್ರಕರಣಗಳನ್ನು ನಿಯಂತ್ರಣದಲ್ಲಿಡಲಾಗಿರುತ್ತದೆ.

ವಿಷಯ:- ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡಲು ಕಾವೇರಿ 4ನೇ ಹಂತದ ನೀರಿನ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 696 (1204)

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ಜಲಮಂಡಲಿ ಕಾವೇರಿ 4ನೇ ಹಂತದ ನೀರಿನ ಯೋಜನೆಯನ್ನು ಜಾರಿಗೆ ತರಲು ಜಪಾನಿನ ಸಾಗರೋತ್ತರ ಅಭಿವೃದ್ಧಿ ನಿಧಿಯಿಂದ ಪಡೆಯುವ ಹಣವೆಷ್ಟು?

2) ಈ ಹಣವನ್ನು ಪಡೆಯಬೇಕಾದರೆ ಪ್ರತಿ ಮೂರು ವರ್ಷಗಳಿಗೊಮ್ಮೆ ನೀರಿನ ದರವನ್ನು ಏರಿಸಬೇಕೆಂಬ ನಿಬಂಧನೆಯನ್ನು ಸದರಿ ಸಂಸ್ಥೆ ವಿದಿಸಿದೆಯೇ?

3) ಹಾಗಿದ್ದಲ್ಲಿ ಈ ನಿಬಂಧನೆಯನ್ನು ಸರ್ಕಾರದವರು ಒಪ್ಪಿಕೊಂಡಿರುವರೇ?

4) ಈ ಯೋಜನೆಯ ಮೊದಲ ಹಂತದ ಕೆಲಸ ಪ್ರಾರಂಭಿಸಲಾಗಿದೆಯೇ?

5) ಈ ಮೊದಲನೆಯ ಹಂತದ ಕಾಮಗಾರಿಗೆ ಮೇಲ್ಕಂಡ ನಿಧಿಯಿಂದ ಹಣ ಬಿಡುಗಡೆಯಾಗಿದೆಯೆ?

6) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

8) ಇದರಿಂದ ಬೆಂಗಳೂರು ನಗರಕ್ಕೆ ದೊರಕಲಿರುವ ನೀರಿನ ಪ್ರಮಾಣವೆಷ್ಟು?

ಶ್ರೀ ಅನಾಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):-

1) ಕಾವೇರಿ ನಾಲ್ಕನೇ ಹಂತದ ಕೆಲಸಗಳಿಗೆ ಜಪಾನಿನ ಸಾಗರೋತ್ತರ ಅಭಿವೃದ್ಧಿ

ನಿಧಿಯಿಂದ 804.00 ಕೋಟಿ ರೂ.ಗಳನ್ನು ಪಡೆಯಲಾಗುವುದು.

2) ಜಪಾನಿನ ಸಾಗರೋತ್ತರ ಸಂಸ್ಥೆಯವರು ಬೆಂಗಳೂರು ಜಲಮಂಡಲಿಗೆ ನೀರಿನ ದರವನ್ನು ಹೆಚ್ಚಿಸಿ ಯೋಜನೆಯನ್ನು ಆರ್ಥಿಕವಾಗಿ ಸರಿಹೊಂದಲು ಸೂಚಿಸಿರುತ್ತಾರೆ. ಯೋಜನೆಯನ್ನು ಆರ್ಥಿಕವಾಗಿ ಸರಿ ಹೊಂದಿಸಲು ಅಗತ್ಯಬಿದ್ದಾಗ ನೀರಿನ ದರವನ್ನು ಹೆಚ್ಚಿಸುವುದಾಗಿ ಜಪಾನಿನ ಸಂಸ್ಥೆಗೆ ಜಲಮಂಡಲಿಯು ಭರವಸೆ ನೀಡಿದೆ.

3) ನೀರಿನ ದರವನ್ನು ಅಗತ್ಯಬಿದ್ದಾಗ ಏರಿಸಲು ಕರ್ನಾಟಕ ಸರ್ಕಾರವು ತತ್ವಶಃ ಒಪ್ಪಿದೆ.

4) ಕಾವೇರಿ 4ನೇ ಹಂತದ ಮೊದಲನೆಯ ಘಟ್ಟದ ಆರಂಭದ ಕೆಲಸಗಳು 1996-97ರಿಂದ ಪ್ರಾರಂಭವಾಗಿವೆ.

5) -ಇಲ್ಲ-

6) -ಇಲ್ಲ-

7) ಈ ಯೋಜನೆಯನ್ನು 2001-02ರ ವೇಳೆಗೆ ಪೂರ್ಣಗೊಳಿಸಲಾಗುವುದು.

8) ಈ ಯೋಜನೆಯಿಂದ ಬೆಂಗಳೂರು ನಗರಕ್ಕೆ ದಿನಂಪ್ರತಿ 270 ದಶಲಕ್ಷ ಲೀಟರ್ ನೀರು ಅಧಿಕವಾಗಿ ದೊರಕಲಿದೆ.

ವಿಷಯ:- ಬೆಂಗಳೂರು ನಗರದಲ್ಲಿ ಕೊಳವೆ ಭಾವಿಗಳ ದುರಸ್ಥಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 684 (1201)

ಶ್ರೀ ಪಿ.ಎನ್.ಪ್ರಕಾಶ್:- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಕೊಳವೆ ಬಾವಿಗಳು ಕೆಟ್ಟುಹೋಗಿ ದುರಸ್ತಿಗೊಳ್ಳದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದು ನಿಜವಾದರೆ ಸರ್ಕಾರವು ಈ ದಿಸೆಯಲ್ಲಿ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆನಂತನಾಗ್ (Minister of State of Bangalore City Development):-

ಅ) ಹೌದು.

ಆ) ಬೆಂಗಳೂರು ಜಲಮಂಡಳಿ ನಗರದಲ್ಲಿರುವ ಕೊಳವೆ ಬಾವಿಗಳ ನಿರ್ವಹಣೆಯನ್ನು ಮಾಡುತ್ತಿದೆ. ಕೊಳವೆ ಬಾವಿಗಳು ಕೆಟ್ಟುಹೋಗಿರುವ ಬಗ್ಗೆ